# ವಿವಾದದಲ್ಲಿ ಅರ್ಜುನ ರಣತುಂಗ



90ರ ದಶಕದ ಕ್ರಿಕೆಟ್ ಲೋಕದ ಮಹಾತಾರೆ ಅರ್ಜುನ ರಣತುಂಗ ಸದಾ ಸುದ್ದಿಯಲ್ಲಿರುವುದು ಸಹಜ ಎನ್ನುವಂತಾಗಿದೆ. ಸದ್ಯಕ್ಕೆ ಶ್ರೀಲಂಕಾದ ಪದಚ್ಯುತ ಸಚಿವ ಸಂಪುಟದ ಸದಸ್ಯರಾಗಿರುವ ರಣತುಂಗ, ಇತ್ತೀಚೆಗೆ ಪೊಲೀಸರಿಂದ ಬಂಧನಕ್ಕೆ ಒಳಗಾದರು. ಶ್ರೀಲಂಕಾದಲ್ಲಿ ರಾಷ್ಟ್ರದ ಅಧ್ಯಕ್ಷರು ಮತ್ತು ಪ್ರಧಾನಿಯ ನಡುವೆ ನಡೆದಿರುವ ರಾಜಕೀಯ ಮೇಲಾಟದಲ್ಲಿ ರಣತುಂಗ ಪ್ರಧಾನಿಯ ಪರ. ಇತ್ತೀಚೆಗೆ ಅಧ್ಯಕ್ಷರ ಪರವಾದ ಜನರ ಗುಂಪೊಂದು ರಣತುಂಗ ಅವರ ಮೇಲೆ ದಾಳಿ ನಡೆಸಲು ಬಂದಾಗ, ತನ್ನ ಅಂಗರಕ್ಷಕರಿಗೆ ಆ ಗುಂಪಿನ ಮೇಲೆ ಗುಂಡು ಹಾರಿಸಲು ಹೇಳಿದ್ದೇ ರಣತುಂಗ ಮಾಡಿರುವ ಅಪರಾಧ ಎನ್ನುವುದು ಪೊಲೀಸರ ಹೇಳಿಕೆ. ಈ ಗುಂಡು ಹಾರಾಟದಲ್ಲಿ ಒಬ್ಬ ವ್ಯಕ್ತಿ ಅಸುನೀಗಿದ್ದು ಅದನ್ನೇ ರಾಜಕೀಯ ವಿರೋಧಿ ಗುಂಪು ರಣತುಂಗರನ್ನು ಹಣಿಯಲು ಬಳಸುತ್ತಿದೆ.

90ರ ದಶಕದಲ್ಲಿ ಶ್ರೀಲಂಕಾ ಕ್ರಿಕೆಟ್ ತಂಡದ ಆಟವನ್ನು ನೋಡುವುದೇ ಒಂದು ಸೊಗಸು. ಒಬ್ಬರಿಗಿಂತ ಒಬ್ಬರು ಮಿಗಿಲಾಗಿದ್ದ ಬ್ಯಾಟ್ಸ್‌ಮನ್‌ಗಳ ದಂಡು. ಅದರಲ್ಲೂ ತಂಡದ ನಾಯಕ ಅರ್ಜುನ್ ರಣತುಂಗ ತನ್ನ ಮೈದಾನದ ತಂತ್ರಗಾರಿಕೆಗೆ ಹೆಸರುವಾಸಿ. 1988ರಿಂದ ಶ್ರೀಲಂಕಾ ತಂಡದ ಕ್ಯಾಪ್ಟನ್ ಆಗಿ 11 ವರ್ಷಗಳ ಕಾಲ ದೇಶದ ಕ್ರಿಕೆಟನ್ನು ಉತ್ತುಂಗಕ್ಕೇರಿಸಿದ ಕೀರ್ತಿ ರಣತುಂಗ ಅವರದ್ದು. 1996ರಲ್ಲಿ ಈತನ ನಾಯಕತ್ವದಲ್ಲೇ ಶ್ರೀಲಂಕಾ ಕ್ರಿಕೆಟ್ ವಿಶ್ವಕಪ್ ಗೆದ್ದು ಚಾಂಪಿಯನ್ ಆಗಿ ಮೆರೆಯಿತು. 93 ಟೆಸ್ಟ್‌ಗಳಲ್ಲಿ 5105 ರನ್‌ಗಳು ಮತ್ತು 269 ಏಕದಿನ ಪಂದ್ಯಗಳಲ್ಲಿ 7456 ರನ್‌ಗಳು. ಆಗ 50 ಓವರ್‌ಗಳ ಪಂದ್ಯಗಳೇ ಹೆಚ್ಚು ಜನಪ್ರಿಯವಾಗಿದ್ದವು. ಅದರಲ್ಲೂ ರಣತುಂಗ, ಜಯಸೂರ್ಯ ಮುಂತಾದವರ ಸಿಕ್ಸರ್, ಬೌಂಡರಿಗಳನ್ನು ನೋಡುವುದೇ ಒಂದು ಸೊಗಸು.

50 ಓವರ್‌ಗಳ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಮೊದಲ 15 ಓವರ್‌ಗಳಲ್ಲಿ ಅತ್ಯಧಿಕ ರನ್‌ಗಳನ್ನು ಸೇರಿಸಬೇಕೆಂಬ ಹೊಸ ತಂತ್ರವನ್ನು ರೂಪಿಸಿದ್ದೇ ರಣತುಂಗ ಅವರ ಯಶಸ್ಸಿಗೆ ಬಹುದೊಡ್ಡ ಕಾರಣ. ಮೊದಲ 15 ಓವರ್‌ಗಳಲ್ಲಿ ಬಹುತೇಕ ಫೀಲ್ಡರ್‌ಗಳು ಒಳವರ್ತುಲದಲ್ಲಿ ಇರಬೇಕೆಂಬ ಕ್ರಿಕೆಟ್‌ನ ನಿಯಮವನ್ನು ಅತ್ಯುತ್ತಮವಾಗಿ ಬಳಸಿಕೊಂಡ ಕೀರ್ತಿ ಈ ಕ್ಯಾಪ್ಟನ್‌ನದ್ದು. ರಣತುಂಗ ನಾಯಕನಾಗಿದ್ದ ಆ ಕಾಲದಲ್ಲಿ ಜಯಸೂರ್ಯ ಸಿಡಿಲಮರಿಯಂತೆ ಬೆಳಗಲು ಇದೂ ಒಂದು ಕಾರಣ. ತಂಡದ ರನ್ 300 ದಾಟುವುದು ಆಗ ಅನಿವಾರ್ಯವೇ ಎಂಬಂತಾಗಿತ್ತು. ವಿಶ್ವದ ಅತ್ಯುತ್ತಮ ನಾಯಕರಲ್ಲಿ ಒಬ್ಬರೆಂಬ ಪಾರಮ್ಯ ಮೆರೆದ ರಣತುಂಗ, 1996ರಲ್ಲಿ ತಂಡಕ್ಕೆ ವಿಶ್ವಕಪ್ ಗೆದ್ದುಕೊಟ್ಟು ಇತಿಹಾಸ ನಿರ್ಮಿಸಿದರು.

ಆದರೆ ಮೂರು ವರ್ಷಗಳ ಬಳಿಕ 1999ರಲ್ಲಿ ರಣತುಂಗ ನಾಯಕತ್ವ ತೊರೆಯಬೇಕಾಯಿತು. ಇಂಗ್ಲೆಂಡಿನಲ್ಲಿ ನಡೆದ ವಿಶ್ವಕಪ್ ಟೂರ್ನಿಯಲ್ಲಿ ಶ್ರೀಲಂಕಾ ತಂಡದ ಕಳಪೆ ಸಾಧನೆ ಅದಕ್ಕೆ ಕಾರಣವಾಯಿತು. ಅದರ ಹೊರತಾಗಿಯೂ ಆ ವರ್ಷದ ವಿಶ್ವದ ಅತ್ಯುತ್ತಮ ಐವರು ವಿಸ್‌ಡಮ್ ಆಟಗಾರರಲ್ಲಿ ರಣತುಂಗ ಒಬ್ಬರೆಂದು ಆಯ್ಕೆಯಾದರು. ಶ್ರೀಲಂಕಾ ಪರವಾಗಿ ಮೊದಲ ಟೆಸ್ಟ್ ಮತ್ತು ನೂರನೇ ಟೆಸ್ಟ್ ಆಡಿದ ಏಕೈಕ ಆಟಗಾರ ಎಂಬ ದಾಖಲೆಯೂ ಅವರ ಹೆಸರಲ್ಲಿದೆ.

ರಣತುಂಗ ಅವರಿಗೆ ವಿವಾದಗಳು ಹೊಸದಲ್ಲ. ಹಲವು ಪಂದ್ಯಗಳಲ್ಲಿ ಬ್ಯಾಟಿಂಗ್ ಮಾಡುವಾಗ ರನ್ನರ್ ಸಹಾಯ ಪಡೆಯುತ್ತಿದ್ದುದು ಅವರ ವಿರುದ್ಧ ಪ್ರಮುಖ ಟೀಕೆಗೆ ಕಾರಣವಾಗಿತ್ತು. ನಾಯಕನಿಗೆ ದೈಹಿಕ ಕ್ಷಮತೆ ಇಲ್ಲದಿದ್ದರೆ ಆಡಬಾರದು ಎಂಬ ಟೀಕೆಗಳೂ ಕೇಳಿಬಂದವು. 1996ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದ ತ್ರಿಕೋನ ಸರಣಿಯಲ್ಲಿ ಎದುರಾಳಿ ಆಟದ ಕೈಕುಲುಕಬೇಡಿ ಎಂಬ ಈ ಕ್ಯಾಪ್ಟನ್ ಆದೇಶ ಹೊರಡಿಸಿದ್ದರು! ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಮುತ್ತಯ್ಯ ಮುರಳೀಧರನ್ ಚೆಂಡನ್ನು ಎಸೆಯುತ್ತಾನೆಂಬ ಆರೋಪ ಬಂದಾಗ, ರಣತುಂಗ ತನ್ನ ಬೌಲರ್ ಪರವಾಗಿ ನಿಂತು ಅಂಪೈರ್ ಜೊತೆಗೆ ಖಡಾಖಡಿ ಜಗಳ ಮಾಡಿದ್ದರು. ಒಂದು ಹಂತದಲ್ಲಿ ಆಟ ನಿಲುಗಡೆಯಾಗಿ ಕಾಮೆಂಟ್ರಿಯವರಿಂದ ತೀವ್ರ ಟೀಕೆಗೂ ಒಳಗಾದರು. 2000ದಲ್ಲಿ ರಣತುಂಗ ಮತ್ತು ಅರವಿಂದ ಡಿಸಿಲ್ವ ಮ್ಯಾಚ್ ಫಿಕ್ಸಿಂಗ್‌ನಲ್ಲಿ ಭಾಗಿಯಾಗಿದ್ದಾರೆಂಬ ಆರೋಪವೂ ಬಂತು. ಆದರೆ ಕೆಲವೇ ವಾರಗಳಲ್ಲಿ ಆ ಆರೋಪದಲ್ಲಿ ಹುರುಳಿಲ್ಲ ಎಂದು ತನಿಖಾ ತಂಡ ತೀರ್ಪು ನೀಡಿತು.

ರಾಜಕೀಯಕ್ಕೆ ಇಳಿದು ಸಚಿವರಾದ ಬಳಿಕ ಕ್ರಿಕೆಟ್‌ನ ಭ್ರಷ್ಟಾಚಾರವನ್ನು ಮಟ್ಟ ಹಾಕುವ ಬಗ್ಗೆ ರಣತುಂಗ ಸಾಕಷ್ಟು ಸಲ ಮಾತನಾಡಿದ್ದಾರೆ. ಭ್ರಷ್ಟಾಚಾರ ತಡೆಗೆ ಐಸಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ, ದೊಡ್ಡ ತಿಮಿಂಗಿಲಗಳು ತಪ್ಪಿಸಿಕೊಳ್ಳುತ್ತಿದ್ದು, ಸಣ್ಣ ಪುಟ್ಟ ಆಟಗಾರರಷ್ಟೇ ಸಿಕ್ಕಿಬೀಳುತ್ತಿದ್ದಾರೆ ಎನ್ನುವ ಅವರ ಹೇಳಿಕೆ ಸಾಕಷ್ಟು ವಿವಾದಕ್ಕೂ ಕಾರಣವಾಗಿತ್ತು. ಇತ್ತೀಚೆಗೆ ಶ್ರೀಲಂಕಾದಲ್ಲಿ ಕ್ರಿಕೆಟ್ ಭ್ರಷ್ಟಾಚಾರದ ವಿರುದ್ಧ ಸೂಕ್ತ ಕಾನೂನು ಮತ್ತು ತನಿಖೆ ವಿಧಾನ ರೂಪಿಸಲು ಭಾರತದ ಸಿಬಿಐ ಯ ನೆರವು ಪಡೆಯುವುದಾಗಿಯೂ ರಣತುಂಗ ಹೇಳಿಕೆ ನೀಡಿದ್ದರು.

ಕ್ರಿಕೆಟ್ ತಂಡದಲ್ಲಿದ್ದಾಗ ನಮ್ಮ ದೋನಿಯಂತೆ ರಣತುಂಗ ಅವರೂ ಕ್ಯಾಪ್ಟನ್ ಕೂಲ್ ಎಂಬ ಬಿರುದು ಪಡೆದಿದ್ದರು. ಅವರ ತಂದೆ ರಾಜಕಾರಣಿಯಾಗಿದ್ದವರು. ಕ್ರಿಕೆಟ್‌ನಿಂದ ನಿವೃತ್ತಿಯಾದ ಬಳಿಕ 2005ರಲ್ಲಿ ರಣತುಂಗ ಕೂಡಾ ರಾಜಕೀಯಕ್ಕೆ ಬಂದರು. 2–3 ಪಕ್ಷಗಳನ್ನೂ ಬದಲಾಯಿಸಿದರು. ಆದರೆ ರಾಜಕೀಯದಲ್ಲಿ ಕೂಲ್ ಆಗಿ ಹೆಸರು ಪಡೆಯುವುದು ಕಷ್ಟ. ರಾಷ್ಟ್ರಾಧ್ಯಕ್ಷರ ಜತೆಗೆ ಸಂಘರ್ಷಕ್ಕೆ ಇಳಿದಿರುವ ಹಿನ್ನೆಲೆಯಲ್ಲಿ ರಣತುಂಗ ವಿರುದ್ಧ ಕೊಲೆ ಆರೋಪ ಯಾವ ತಿರುವು ಪಡೆಯುತ್ತದೆ ಎಂದು ಈಗಲೇ ಹೇಳುವುದು ಕಷ್ಟ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65